**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ19-12-2025**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ನಾನು ಹಿಸ್ಸ ಪತ್ರ, ಕ್ರಯ ಪತ್ರ ಮತ್ತು ಹಕ್ಕು ಖುಲಾಸೆ ಪತ್ರಗಳನ್ನು ಈ ದಾವೆಗಾಗಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಾವನಾ ರವರ ತಾಯಿ ಮತ್ತು ಸಹೋದರ ಮತ್ತು ಸಹೋದರಿಯರು ನಮ್ಮ ಮನೆಯ ಪಕ್ಕದಲ್ಲಿ ವಾಸವಿರುತ್ತಾರೆ. ಅವರಿಗೆ ಪಾವನಾ ರವರ ಬಗ್ಗೆ ಮತ್ತು ಅವರು ಎಲ್ಲಿ ವಾಸವಿರುತ್ತಾರೆ ಎಂದು ಗೊತ್ತಿರುತ್ತದೆ ಎಂದರೆ ಸರಿ. ಪಾವನಾ ರವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷ್ಯ ನುಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ಪ್ರತಿವಾದ ಪತ್ರದಲ್ಲಿ ವಾದಿಯರು ಅನಿಲ್ ರವರ ಹೆಂಡತಿ ಮಕ್ಕಳು ಅಲ್ಲ ಎಂದು ತಿಳಿಸಿರುತ್ತೇವೆ ಎಂದರೆ ಸರಿ. ವಾದಿಯರ ಮತ್ತು ನನ್ನ ಡಿ ಎನ್ ಎ ಪರೀಕ್ಷೆ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ.

ರಾಷ್ಟ್ರೀಯ ಹೆದ್ದಾರಿ ಯಿಂದ ನಾನು ಪರಿಹಾರ ಹಣ ಪಡೆಯುವಾಗ ವಂಶವೃಕ್ಷದಲ್ಲಿ ಅನಿಲ್ ರವರ ಹೆಸರನ್ನು ಬಿಟ್ಟು ಬರೆಸಿರುತ್ತೇನೆ ಎಂದರೆ ಪೌತಿ ಎಂದು ಬರೆಸಿರುತ್ತೇನೆ. ವಂಶವೃಕ್ಷದಲ್ಲಿ ಅನಿಲ್ ರವರ ವಾರಸುದಾರರನ್ನು ಬರೆಸಿಲ್ಲ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿ ಗೆ ನೀಡಿರುವ ಒಪ್ಪಿಗೆ ಪತ್ರಗಳಲ್ಲಿ ನನ್ನ ಹೆಸರನ್ನು ಮಾತ್ರ ನಮೂದು ಮಾಡಿರುತ್ತಾರೆ ಎಂದರೆ ಸರಿ. ವಾದಿಯರು ದಾವ ಆಸ್ತಿಗಳಲ್ಲಿ ಜಂಟಿ ಖಾತೆ ಮಾಡುವಂತೆ ತಹಸೀಲ್ದಾರ ರವರಿಗೆ ಅರ್ಜಿ ನೀಡಿದ್ದು, ಅದು ವಜಾ ಆಗಿದ್ದರಿಂದ ಅದನ್ನು ಪ್ರಶ್ನಿಸಿ ಆರ್ ಎ ನಂ 192/2016-17 ರಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವೆ ಚಾಲ್ತಿ ಇರುವಾಗ ಅರ್ಜಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆ 2018 ರಲ್ಲಿ ಹೂಡಿದ್ದು, ಈ ದಾವೆ ಹೂಡುವ ಮೊದಲೇ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಮುಂಚೆಯು ಹಾಕಿರುತ್ತಾರೆ ಆನಂತರವೂ ಕೂಡ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತಹಸೀಲ್ದಾರ ರವರ ಖಾತೆ ಬದಲಾವಣೆ ರದ್ದು ಮಾಡಿ ವಾದಿಯರ ಹೆಸರನ್ನು ಒಳಗೊಂಡು ಜಂಟಿ ಖಾತೆ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಎ ಸಿ ನ್ಯಾಯಾಲಯದಲ್ಲಿ ಹಾಜರಾಗಿಲ್ಲ. ಸಾಕ್ಷಿ

ಮುಂದುವರೆದು ವಕೀಲರ ಮೂಲಕ ನಾನು ಒಂದು ಬಾರಿ ಎ ಸಿ ನ್ಯಾಯಾಲಯಕ್ಕೆ ಹೋಗಿದ್ದೆ. ಆನಂತರ ಹಾಜರಾಗಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ನಾನು ತಕರಾರು ಹಾಕಿರುತ್ತೇನೆ. ವಾದಿಯರು ಕಾನೂನು ಬದ್ದ ವಾರಸುದಾರರು ಆಗಿದ್ದರಿಂದ ಅವರ ಹೆಸರಿನಲ್ಲಿ ಜಂಟಿ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ವಾರಸುದಾರರು ಅಲ್ಲ ಎಂದು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ದಾವ ಆಸ್ತಿ ವಾದಿಯರ ಹೆಸರಿನಲ್ಲಿ ಜಂಟಿ ಖಾತೆಯಾಗಿರುತ್ತದೆ ಎಂದರೆ ಸುಳ್ಳು ದಾಖಲಾತಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎ ಸಿ ಆದೇಶದಂತೆ ವಾದಿಯರು ಹೆಸರಿನಲ್ಲಿ ಜಂಟಿ ಖಾತೆಯಾಗಿರುತ್ತದೆ ಎಂದರೆ ಸುಳ್ಳು ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎ ಸಿ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಹಾಸನದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಅದರ ನಂಬರ್ ಗೊತ್ತಿಲ್ಲ. ನಾನು ಯಾವುದೇ ಮೇಲ್ಮನವಿ ಸಲ್ಲಿಸದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಅನಿಲ್ ರವರ ಹೆಂಡತಿ ಮಕ್ಕಳು ಇದ್ದು ನಮ್ಮ ವಾರಸುದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ವಾದಿಯರಿಗೆ ಸಮಾನ ಪಾಲು ಇರುತ್ತದೆ ಎಂದರೆ ಸರಿಯಲ್ಲ.

ವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿರುತ್ತೇನೆ. ಅನಿಲ್ ರವರು ಮರಣ ಹೊಂದುವ ಸಮಯದಲ್ಲಿ ನಮ್ಮ ಜೊತೆ ಇದ್ದರು ಎಂದರೆ ಸರಿಯಲ್ಲ. ಅನಿಲ್ ರವರು ಆಸ್ಪತ್ರೆಯಲ್ಲಿ ಮರಣ ಹೊಂದಿದ್ದರೆ ಅದರ ದಾಖಲಾತಿಗಳನ್ನು ನಮೂದು ಮಾಡುತ್ತಾರೆ ಆದ್ದರಿಂದ ಅವರು ಆಸ್ಪತ್ರೆಯಲ್ಲಿ ಮರಣ ಹೊಂದಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ವಾದಿಯರು ಅನಿಲ್ ರವರು ಮಕ್ಕಳು ಎಂದು ತೋರಿಸಲು ಶಾಲಾ ದಾಖಲಾತಿ ಹಾಜರುಪಡಿಸಿರುತ್ತಾರೆ ಎಂದರೆ ಈ ಕೇಸಗಾಗಿ ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪಡಿತರ ಚೀಟಿ ನೀಡುವಾಗ ಅವರ ಕುಟುಂಬಸ್ಥರ ಬಗ್ಗೆ ವಿಚಾರ ಮಾಡಿದ ನಂತರ ವಾದಿಯರಿಗೆ ನಿ ಪಿ 19 ರಂತೆ ಪಡಿತರ ಚೀಟಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಅಧಿಕಾರಿಗಳು ಸ್ಥಾನಿಕ ಪರಿಶೀಲನೆ ಮಾಡಿದ ನಂತರವೇ ತಹಸೀಲ್ದಾರ ರವರು ನಿ ಪಿ 30ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಯರು ಅವಳಿ ಜವಳಿ ಮಕ್ಕಳು ಎಂದರೆ ಗೊತ್ತಿಲ್ಲ. ಅವರು ಬೆಂಗಳೂರಿನ ಜ್ಯೋತಿ ನರ್ಸಿಂಗ್ ಹೋಂ ನಲ್ಲಿ ಜನಿಸಿದ್ದು ಆಸ್ಪತ್ರೆಯಲ್ಲಿ ಅವರ ತಂದೆಯ ಹೆಸರು ಅನಿಲ್ ಎಂದು ನಮೂದಾಗಿದೆ ಎಂದರೆ ಗೊತ್ತಿಲ್ಲ. **ಸಾಕ್ಷಿಗೆ ಈಗ 2 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ನನ್ನ ಸಹೋದರ ಅನಿಲ್ ಮತ್ತು**

**ವಾದಿ ಕವಿತಾ ರವರು ಇರುತ್ತಾರೆ ಎಂದು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿ 34 ಮತ್ತು 35 ಎಂದು ಗುರುತಿಸಲಾಯಿತು.**

ರಾಷ್ಟ್ರೀಯ ಹೆದ್ದಾರಿ ಗೆ 7 ಗುಂಟೆ ಜಮೀನು ಸ್ವಾಧೀನವಾಗಿರುತ್ತದೆ. ಉಳಿಕೆ 10 ಗುಂಟೆ ಇರುತ್ತದೆ. ಉಳಿಕೆ 10 ಗುಂಟೆಗೆ ವಾದಿಯರು ಹೆಸರು ಸೇರಿಸಿ ಜಂಟಿ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. 7 ಗುಂಟೆ ಸಲುವಾಗಿ 21 ಲಕ್ಷ ಪರಿಹಾರ ಬಂದಿರುತ್ತದೆ. ಪರಿಹಾರ ಹಣದ ಬಗ್ಗೆ ದಾಖಲಾತಿ ಹಾಜರುಪಡಿಸಿರುತ್ತೇನೆ. 21 ಲಕ್ಷದಲ್ಲಿ ವಾದಿಯರಿಗೂ ಹಿಸ್ಸೆ ಇದೆ ಎಂದರೆ ಸರಿಯಲ್ಲ. ನನ್ನನ್ನು ಹೊರತು ಪಡಿಸಿ ಉಳಿದ ಪ್ರತಿವಾದಿಯವರು ಸಕಲೇಶಪುರದಲ್ಲಿ ವಾಸವಿರುವುದಿಲ್ಲ. ಉಳಿದ ಪ್ರತಿವಾದಿಯರಿಗೆ ಈ ದಾವದ ಬಗ್ಗೆ ವಿಚಾರ ತಿಳಿಸದೇ ನಾನೇ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೊಣೆಗಾರಿಗೆಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ವಾದಿಯರು ನಮ್ಮ ಕುಟುಂಬಸ್ಥರು ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾವನಾ ಎಂಬುವವರು ಇಲ್ಲದೇ ಇದ್ದರೂ ನಾನು ಈ ಪ್ರಕರಣಕ್ಕಾಗಿ ಸುಳ್ಳು ಕತೆ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ನಮ್ಮ ಕುಟುಂಬಸ್ದರು ಇರುವುದರಿಂದ ದಾವ ಆಸ್ತಿಯಲ್ಲಿ ಮತ್ತು ಪರಿಹಾರ ಹಣದಲ್ಲಿ ಅವರಿಗೂ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**